# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1046 |
| ಮಾನ್ಯ ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 20.08.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಸಾರ್ವಜನಿಕರು ತಮ್ಮ ಜಮೀನು ಹದ್ದುಬಸ್ತು ಸರ್ವೆಗಾಗಿ ಅರ್ಜಿ ಸಲ್ಲಿಸಬೇಕಾದಲ್ಲಿ ಒದಗಿಸ ಬೇಕಾದ ದಾಖಲಾತಿಗಳು ಯಾವುವು ಮತ್ತು ವಿಧಾನ ಯಾವುದು; ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಮೊತ್ತವೆಷ್ಟು; ಈ ಮೊತ್ತವನ್ನು ಹೇಗೆ ಭರಿಸಬೇಕು;</td><td>ರಾಜ್ಯದಲ್ಲಿ ಸಾರ್ವಜನಿಕರು ತಮ್ಮ ಜಮೀನು ಹದ್ದುಬಸ್ತು ಸರ್ವೆಗಾಗಿ ಅರ್ಜಿ ಸಲ್ಲಿಸಬೇಕಾದಲ್ಲಿ ಹದ್ದುಬಸ್ತು ಕೋರಿರುವ ಸರ್ವೆ ನಂಬರಿನ ಚಾಲ್ತಿ ಸಾಲಿನ ಏಕ ಮಾಲೀಕತ್ವದ ಪಹಣಿಯ ವಿವರ ಹಾಗೂ ಅರ್ಜಿದಾರರ (ಮಾಲೀಕರ) ಆಧಾರ್ ಕಾರ್ಡ್ ಹಾಗೂ ಬಾಜುದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳೊಂದಿಗೆ ಆನ್‌ಲೈನ್‌ನಲ್ಲಿ / ಅಟಲ್-ಜಿ-ಜನಸ್ನೇಹಿ ಕೇಂದ್ರುದಲ್ಲಿ ನಿಗಧಿತ ಶುಲ್ಕ ಭರಿಸಿ ಅರ್ಜಿಯನ್ನು ದಾಖಲಿಸಬೇಕು.<br><br>ಹದ್ದುಬಸ್ತು ಅರ್ಜಿಯೊಂದಿಗೆ ಭರಿಸಬೇಕಾದ ಶುಲ್ಕದ ವಿವರ<br>
<table>
<tr><td>ಗ್ರಾಮೀಣ ಪ್ರದೇಶ</td><td>2 ಎಕರೆವರೆಗೂ<br>2ಎಕರೆಗಿಂತ ಹೆಚ್ಚು</td><td>ರೂ.500/-<br>ಪ್ರತಿ ಎಕರೆಗೆ ಹೆಚ್ಚುವರಿ ಶುಲ್ಕ 300/-</td></tr>
<tr><td>ನಗರ ಪ್ರದೇಶ</td><td>2 ಎಕರೆವರೆಗೂ<br>2ಎಕರೆಗಿಂತ ಹೆಚ್ಚು</td><td>ರೂ.2,000/-<br>ಪ್ರತಿ ಎಕರೆಗೆ ಹೆಚ್ಚುವರಿ ಶುಲ್ಕ 400/-</td></tr>
</table>
ನೋಟೀಸ್ ಶುಲ್ಕ ಗ್ರಾಮಿಣ ಮತ್ತು ನಗರ ಪ್ರದೇಶದ ಅರ್ಜಿದಾರರು ಮತ್ತು ಪ್ರತಿ ಬಾಜುದಾರರಿಗೆ ರೂ.25/- ಆಗಿರುತ್ತದೆ.</td></tr>
<tr><td>(ಆ)</td><td>ಸರ್ವೆಗಾಗಿ ನಿಗದಿಪಡಿಸಿರುವ ಭೂಮಾಪಕರ ಸರ್ವೆ ದಿನದ ಜವಾಬ್ದಾರಿ ಮತ್ತು ಕರ್ತವ್ಯವೇನು; ಅರ್ಜಿದಾರರಿಗೆ ನೀಡಬೇಕಾದ ದಾಖಲೆಗಳಾವುವು;</td><td>ಭೂಮಾಪಕರು ಹದ್ದುಬಸ್ತು ಅಳತೆ ದಿನಾಂಕವನ್ನು ನಿಗಧಿಪಡಿಸಿ ಅರ್ಜಿಯಲ್ಲಿ ದಾಖಲಿಸಿರುವ ಅರ್ಜಿದಾರರು ಮತ್ತು ಬಾಜುದಾರರ ವಿಳಾಸಕ್ಕೆ ಮುದ್ದಾಂ ಅಥವಾ ಅಂಚೆ ಮೂಲಕ ಜಾರಿ ಮಾಡಿ ಸ್ವೀಕೃತಿ ಪಡೆಯಬೇಕು. ಆನಂತರ ಭೂಮಾಪಕರು ಕಛೇರಿಯಿಂದ ಸಂಬಂಧಪಟ್ಟ ಸರ್ವೆ ನಂಬರ್ & ಬಾಜು ಸರ್ವೆ ನಂಬರುಗಳ ಭೂದಾಖಲೆಗಳನ್ನು (ಮೂಲ & ಹಿಸ್ಸಾ ಟಿಪ್ಪಣಿ / ಪಿ.ಟಿ.ಶೀಟ್ / FMB) ಪಡೆದು ಜಂಟಿ ನಕ್ಷೆ ತಯಾರಿಸಿಕೊಳ್ಳಬೇಕು.<br><br>ಅಳತೆ ದಿನ ಭೂಮಾಪಕರ ಕರ್ತವ್ಯ & ಜವಾಬ್ದಾರಿಗಳು:-</td></tr>
</table>

| | | |
|---|---|---|
| | | • ಭೂಮಾಪಕರು ನಿಗಧಿತ ದಿನಾಂಕದಂದು ಸಮಯಕ್ಕೆ ಸರಿಯಾಗಿ ಸ್ಥಳಕ್ಕೆ ತೆರಳಿ, ಹಾಜರಿರುವ ಅರ್ಜಿದಾರರು ಹಾಗೂ ಬಾಜುದಾರರ ಸಮ್ಮುಖದಲ್ಲಿ ಭೂದಾಖಲೆಗಳನ್ನಾಧರಿಸಿ ನಿಯಮಾನುಸಾರ ಅಳತೆ ಮಾಡಿ ಗಡಿ ಗುರ್ತಿಸಬೇಕು.<br>• ನೋಟೀಸು ಜಾರಿ ಮಾಡಲಾಗಿಯೂ ಬಾಜುದಾರರು ಹಾಜರಿರದಿದ್ದಲ್ಲಿ, ಬಾಜುದಾರರು ಅಳತೆ ನಿರಾಕರಿಸಿದರೆ ಅಳತೆ ನಿಲ್ಲಿಸುವಂತಿಲ್ಲ.<br>• ನ್ಯಾಯಾಲಯದ ನಿರ್ಧಿಷ್ಟ ತಡೆಯಾಜ್ಞೆ ಇದ್ದಲ್ಲಿ ಅಥವಾ ಅರ್ಜಿದಾರರು ಕೋರಿದಲ್ಲಿ ಮಾತ್ರ ಅಳತೆ ಕಾರ್ಯ ಸ್ಥಗಿತ ಗೊಳಿಸುವುದು, ಹೊರತಾಗಿ ಯಾವುದೇ ಕಾರಣಕ್ಕೂ ಅಳತೆ ಸ್ಥಗಿತಗೊಳಿಸುವಂತಿಲ್ಲ/ನಿರಾಕರಿಸುವಂತಿಲ್ಲ.<br>• ಸ್ಥಳದಲ್ಲಿ ಗಲಾಟೆ ಆಗುವ ಸಂದರ್ಭದಲ್ಲಿ ಭೂಮಾಪಕರು ಅಳತೆ ಕಾರ್ಯ ಸ್ಥಗಿತಗೊಳಿಸಿ, ಈ ಬಗ್ಗೆ ಹಾಜರಿದ್ದ ಅರ್ಜಿದಾರರು / ಬಾಜುದಾರು / ಗ್ರಾಮಸ್ಥರ ಸಹಿಯೊಂದಿಗೆ ಮಹಜರ್ ಮಾಡಿ ಕಛೇರಿಗೆ ಮಾಹಿತಿ ನೀಡುವುದು ಮತ್ತು ನಂತರ ಪೊಲೀಸು ರಕ್ಷಣೆ ಪಡೆದು ದಿನಾಂಕ ಮರುನಿಗಧಿ ಪಡಿಸಿ ಹದ್ದುಬಸ್ತು ಅಳತೆ ಪೂರ್ಣ ಗೊಳಿಸಬೇಕು..<br>• ಅಳತೆ ಮಾಡಿ ಜಮೀನಿನ ಗಡಿ ಗುರುತಿಸಿ, ಹಾಜರಿದ್ದ ಅರ್ಜಿದಾರರು, ಬಾಜುದಾರರು ಮತ್ತು ಗ್ರಾಮಸ್ಥರ ಸಹಿಯೊಂದಿಗೆ ಮಹಜರ್ ಮಾಡುವುದು ಮತ್ತು ಅಳತೆ ವೇಳೆ ಗೈರು ಹಾಜರಾಗಿದ್ದ ಬಾಜುದಾರರ ವಿವರವನ್ನು ಸಹಾ ಮಹಜರ್ ನಲ್ಲಿ ನಮೂದಿಸುವುದು.<br>• ನಂತರ ನಿಗಧಿತ ಷರಾ ಮತ್ತು ಒತ್ತುವರಿ ವಿವರದೊಂದಿಗೆ ಹದ್ದುಬಸ್ತು ನಕ್ಷೆ ತಯಾರಿಸಿ, ಮೋಜಿಣಿ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಿ ನಂತರ ಸಂಪೂರ್ಣ ಕಡತವನ್ನು ಕಛೇರಿಗೆ ಹಿಂದಿರುಗಿಸತಕ್ಕದ್ದು,<br>• ಕಛೇರಿಯಲ್ಲಿ ಕಡತ ಅಂತಿಮ ಅನುಮೋದನೆಯಾದ ನಂತರ ಅರ್ಜಿದಾರರು ಆನ್‌ಲೈನ್‌ನಲ್ಲಿ / ಅಟಲ್-ಜಿ-ಜನಸ್ನೇಹಿ ಕೇಂದ್ರ ದಲ್ಲಿ ಹದ್ದುಬಸ್ತು ನಕ್ಷೆ ಪಡೆಯಬಹುದು.<br>• ಅರ್ಜಿದಾರರು ಕಛೇರಿಯಲ್ಲಿ/ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ, ನೋಟೀಸ್, ಮಹಜರ್ ಇತ್ಯಾದಿ ದಾಖಲೆಗಳನ್ನು ಪಡೆದು ಕೊಳ್ಳಬಹುದಾಗಿದೆ. |
| (ಇ) | ಹದ್ದುಬಸ್ತು ಸರ್ವೆಗಾಗಿ ಸಂಬಂಧಿಸಿದ ಜಾಗದ ಚತುರ್ದಿಕ್ಕಿಗಿರುವ ಜಾಗದ ಮಾಲೀಕರಿಗೆ ನೋಟೀಸು ನೀಡುವ ಜವಾಬ್ದಾರಿ ಯಾರದು: ಇದರಲ್ಲಿ ಉಂಟಾಗುವ ಲೋಪ ದೋಷಗಳಿಗೆ ಹೊಣೆ ಯಾರು: | ಅರ್ಜಿದಾರರು ತಮ್ಮ ಜಮೀನಿನ ಹದ್ದುಬಸ್ತು ಅಳತೆಗಾಗಿ ಬಾಜುದಾರ ಹೆಸರು ಮತ್ತು ಸ್ಪಷ್ಟ ವಿಳಾಸವನ್ನು ಅರ್ಜಿಯಲ್ಲಿ ದಾಖಲಿಸಿ ನಿಗಧಿತ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಿದ ನಂತರ ಅರ್ಜಿದಾರರು ಅರ್ಜಿಯಲ್ಲಿ ದಾಖಲಿಸಿರುವ ಅರ್ಜಿದಾರರು ಮತ್ತು ಬಾಜುದಾರರಿಗೆ ಕಡ್ಡಾಯವಾಗಿ ನೋಟೀಸ್ ಜಾರಿ ಮಾಡುವ |

| | | |
|---|---|---|
| | | ಜವಾಬ್ದಾರಿ ಭೂಮಾಪಕರದ್ದಾಗಿರುತ್ತದೆ. ಇದರಲ್ಲಿ ಉಂಟಾಗುವ ಲೋಪ ದೋಷಗಳಿಗೆ ಭೂಮಾಪಕರೇ ಹೊಣೆಯಾಗಿರುತ್ತಾರೆ. |
| (ಈ) | ಮಾಹಿತಿಯ ಕೊರತೆಯಿಂದ ಹಾಗೂ ನೋಟೀಸು ನೀಡುವಲ್ಲಿ ಆದ ಪ್ರಕ್ರಿಯೆ ದೋಷಕ್ಕೆ ಸರ್ವೆ ಕಾರ್ಯ ಮೊಟಕುಗೊಳಿಸಿ ಅರ್ಜಿದಾರರಿಂದ ಸಹಿ ಪಡೆದು ಸರ್ವೆ ಅರ್ಜಿಯನ್ನು ವಿಲೇ ಮಾಡಿದಾಗ ಉಂಟಾಗುವ ನಷ್ಟಕ್ಕೆ ಯಾರು ಜವಾಬ್ದಾರರು; ಅರ್ಜಿದಾರರ ಹಿತಾಸಕ್ತಿಯನ್ನು ಹೇಗೆ ಕಾಪಾಡಲಾಗುವುದು; ಇಂತಹ ಪ್ರಕರಣಗಳು ಮರುಕಳಿಸದಂತೆ ಇಲಾಖೆ ಏನು ಕ್ರಮ ವಹಿಸಿದೆ? | ಅರ್ಜಿದಾರರು ಅರ್ಜಿ ಸಲ್ಲಿಸುವಾಗ ಒದಗಿಸಿರುವ ಬಾಜುದಾರರ ಮಾಹಿತಿ ಕೊರತೆಯಿಂದ ನೋಟೀಸು ಜಾರಿ ಮಾಡುವ ಪ್ರಕ್ರಿಯೆ ದೋಷಕ್ಕೆ ಅರ್ಜಿದಾರರೇ ಹೊಣೆಗಾರರಾಗಿರುತ್ತಾರೆ. ಇದಕ್ಕೆ ಭೂಮಾಪಕರಾಗಲೀ ಅಥವಾ ಇಲಾಖೆಯಾಗಲೀ ಜವಾಬ್ದಾರರಲ್ಲ.<br><br>ಒಂದು ವೇಳೆ ಅರ್ಜಿದಾರರು ಎಲ್ಲಾ ಬಾಜುದಾರರ ಹೆಸರು ಮತ್ತು ಸ್ಪಷ್ಟ ವಿಳಾಸಗಳನ್ನು ಒದಗಿಸಿ ನಿಗಧಿತ ನೋಟೀಸು ಶುಲ್ಕ ಪಾವತಿಸಲಾಗಿಯೂ ಭೂಮಾಪಕರು ಸರಿಯಾಗಿ ನೋಟೀಸು ಜಾರಿ ಮಾಡದಿರುವದರಿಂದ ಅಳತೆ ಸ್ಥಗಿತಗೊಂಡು ಅರ್ಜಿಯನ್ನು ವಿಲೇ ಮಾಡಿ, ಅರ್ಜಿದಾರರಿಗೆ ನಷ್ಟ ಉಂಟಾಗಿರುವ ಬಗ್ಗೆ ನಿರ್ದಿಷ್ಟ ಪ್ರಕರಣಗಳು ಗಮನಕ್ಕೆ ಬಂದರೆ, ಕೂಡಲೇ ಸಂಬಂಧಿಸಿದ ಭೂದಾಖಲೆಗಳ ಉಪ ನಿರ್ದೇಶಕರಿಂದ ವರದಿ ಪಡೆದು ತಪ್ಪಿತಸ್ಥ ಭೂಮಾಪಕರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ.<br><br>ಅರ್ಜಿದಾರರ ಹಿತಾಸಕ್ತಿ ಕಾಪಾಡುವ ದೃಷ್ಟಿಯಿಂದ ಯಾವುದೇ ಹದ್ದುಬಸ್ತು ಅರ್ಜಿ ವಿಲೇ ಮಾಡುವ ಪೂರ್ವದಲ್ಲಿ ಅರ್ಜಿಗೆ ಸಂಬಂದಿಸಿದ ಅರ್ಜಿದಾರರು ಮತ್ತು ಎಲ್ಲಾ ಬಾಜುದಾರರಿಗೆ ಭೂಮಾಪಕರು ನಿಯಮಾನುಸಾರ ನೋಟೀಸ್ ಜಾರಿ ಮಾಡಿರುವ ಬಗ್ಗೆ ದಾಖಲೆ ಪರಿಶೀಲಿಸಿ ಖಾತರಿ ಪಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಲಾಗಿರುತ್ತದೆ. |

**ಸಂಖ್ಯೆ: ಕಂಇ 165 ಎಸ್ಎಸ್‌ಸಿ 2025**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು